**ದಿನಾಂಕಃ 30.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಎಸ್ ವಕೀಲರಿಂದಃ**

ದಾವಾ ಅನುಸೂಚಿ ಸ್ವತ್ತುಗಳು ನನ್ನ ಹೆಸರಿಗೆ ಯಾವಾಗ ಬಂದವು ಎಂದು ನನಗೆ ನೆನಪಿಲ್ಲ. ದಾವಾ ಅನುಸೂಚಿ ಸ್ವತ್ತುಗಳು ನನ್ನ ಹೆಸರಿಗೆ ಬಂದಾಗ ಸದರಿ ಆಸ್ತಿಗಳ ಚೆಕ್ಕುಬಂಧಿಗಳು ನನಗೆ ಅಲ್ಪಸ್ವಲ್ಪ ಗೊತ್ತಿರುತ್ತದೆ. ನನ್ನ ತಾತನ ಹೆಸರು ಮುದ್ದಲಿಂಗೇಗೌಡ. ಸದರಿ ಮುದ್ದಲಿಂಗೇಗೌಡರವರು ನನ್ನ ತಾಯಿಯ ತಂದೆ. ಸದರಿ ಮುದ್ದಲಿಂಗೇಗೌಡರವರು ದಾವಾ-1 ನೇ ಅನುಸೂಚಿ ಸ್ವತ್ತನ್ನು ನನ್ನ ತಾಯಿಗೆ ನೀಡಿದ್ದರು. ನಂತರ ನನ್ನ ತಾಯಿಯು ಸದರಿ ಆಸ್ತಿಯನ್ನು ನನಗೆ ನೀಡಿರುತ್ತಾರೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಿಪಿ-3 ರ ದಾಖಲಾತಿಯಲ್ಲಿ ಪ್ರೇಮಾರವರು ಮುದ್ದಲಿಂಗೇಗೌಡರವರಿಗೆ ಸೊಸೆ ಆಗಬೇಕು ಎಂದು ನಮೂದಿಸಿದೆ ಎಂದರೆ ಸರಿ.

ನನ್ನ ಮತ್ತು ನನ್ನ ಗಂಡ ಮುದ್ದೇಗೌಡರವರ ಒಪ್ಪಿಗೆಯ ಮೇರೆಗೆ ಎಂ.ಸಿ ನಂ.47/1995 ರಲ್ಲಿ ಸಲ್ಲಿಸಿದ್ದ ಪ್ರಕರಣದಲ್ಲಿ ದಾವಾ ಅನುಸೂಚಿ ಸ್ವತ್ತುಗಳ ವಿಚಾರದ ಬಗ್ಗೆ ಯಾವುದೇ ಆದೇಶವಾಗಿರುವುದಿಲ್ಲ. ನಂತರ ನಾನು ಮಹದೇವ ಎಂಬುವವರನ್ನು 2 ನೇ ವಿವಾಹ ಮಾಡಿಕೊಂಡಿದ್ದೇನೆ ಎಂದರೆ ಸರಿ. ನನ್ನ ಮತ್ತು ಮಹದೇವರವರ ಸಂಸಾರಿಕ ಜೀವನದಲ್ಲಿ ಪ್ರಸನ್ನ ಎಂಬ ಮಗ ಜನಿಸಿದ್ದಾನೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ಕಂದಾಯ ಪಾವತಿ ಮಾಡಿರುತ್ತೇನೆ. ಸದರಿ ಕಂದಾಯ ರಸೀದಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-2 ರ ಪಹಣಿ ಪತ್ರಿಕೆಯಲ್ಲಿ ವಿಭಜನೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ನಮೂದಿಸಿರುವ ಎಂ.ಆರ್ ನಂ.ಟಿ-263/2021-22 ರಂತೆ ಖಾತೆ ದಾಖಲಾದ್ದಾಗ ನಾನು ಅರ್ಜಿ ಸಲ್ಲಿಸಿದ್ದೆನೋ ಅಥವಾ ಇಲ್ಲವೋ ಎಂದು ನನಗೆ ನೆನಪಿಲ್ಲ. ನಿಪಿ-4 ರಲ್ಲಿ ನಮೂದಿಸಿರುವ ಎಂ.ಆರ್ ನಂ.ಟಿ-16/2021-22 ರಂತೆ ಖಾತೆ ದಾಖಲಾದ್ದಾಗ ನಾನು ಅರ್ಜಿ ಸಲ್ಲಿಸಿದ್ದೆನೋ ಅಥವಾ ಇಲ್ಲವೋ ಎಂದು ನನಗೆ ನೆನಪಿಲ್ಲ. ಸದರಿ ಖಾತೆ ದಾಖಲಾಗಲು ತಾಲ್ಲೂಕು ಕಛೇರಿಯಲ್ಲಿ ನಡೆದಿರುವ ನಡಾವಳಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ಮುದ್ದೇಗೌಡ ಮತ್ತು ಕೆಂಪಮ್ಮರವರಿಗೆ ಪಲ್ಲವಿ ಮತ್ತು ಪಂಚಲಿಂಗ ಎಂಬ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ. ನಾನು ಎಂದಿಗೂ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಸ್ವಾಧೀನತೆ ಹೊಂದಿಲ್ಲ ಎಂದರೆ ಸರಿಯಲ್ಲ. ಮುದ್ದೇಗೌಡರವರು ತಮ್ಮ ಜೀವಿತಾವಧಿಯಲ್ಲಿ ದಾವಾ ಅನುಸೂಚಿ

ಸ್ವತ್ತುಗಳಲ್ಲಿ ಸ್ವಾಧೀನತೆ ಹೊಂದಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮುದ್ದೇಗೌಡರವರ ಮರಣಾನಂತರ ಅವರ ಹೆಂಡತಿ ಕೆಂಪಮ್ಮ ಮತ್ತು ಅವರ ಮಕ್ಕಳಾದ ಪಲ್ಲವಿ ಮತ್ತು ಪಂಚಲಿಂಗರವರು ದಾವಾ ಅನುಸೂಚಿ ಸ್ವತ್ತುಗಳಲ್ಲಿ ಸ್ವಾಧೀನತೆ ಹೊಂದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗಳು ನನ್ನ ವಿರುದ್ಧ ಅಸಲು ದಾವಾ ಸಂ.154/2023 ನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸದರಿ ದಾವೆ ಸಲ್ಲಿಸಿದ್ದ ನಂತರ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿಜವಾಗಿ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಸ್ವಾಧೀನತೆ ಹೊಂದಿದ್ದರೇ 2021-22 ರಲ್ಲಿ ಪುನಃ ಖಾತೆ ಮಾಡಿಸಿಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ 2021-22 ರಲ್ಲಿ ಪುನಃ ಖಾತೆ ದಾಖಲಾತಿಯನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಮುದ್ದೇಗೌಡರವರಿಂದ ವಿವಾಹ ವಿಚ್ಛೇದನವಾಗುವ ಪೂರ್ವದಲ್ಲಿ ದಾವಾ ಅನುಸೂಚಿ ಸ್ವತ್ತುಗಳನ್ನು ನೀಡಿದ್ದರು, ಆನಂತರ ವಿವಾಹ ವಿಚ್ಛೇದನವಾದ ನಂತರ ನನಗೆ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಹಾಗೂ ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಾನು ಸ್ವಾಧೀನತೆ ಇರುವ ಬಗ್ಗೆ ಅಕ್ಕಪಕ್ಕದ ಜಮೀನಿನವರನ್ನು ಸಾಕ್ಷ್ಯ ಮಾಡಿಸಲು ತೊಂದರೆ ಇರುವುದಿಲ್ಲ. ದಾವಾ ಅನುಸೂಚಿ ಸ್ವತ್ತುಗಳ ಖಾತೆಯು ನನ್ನ ಹೆಸರಿಗೆ ಮುದ್ದಲಿಂಗೇಗೌಡರವರ ಸೊಸೆ ಎಂಬ ಕಾರಣಕ್ಕೆ ಬದಲಾವಣೆ ಆಗಿತ್ತು ಎಂದರೆ ಸರಿಯಲ್ಲ. ನನ್ನ ವಿವಾಹ ವಿಚ್ಛೇದನವಾದ ನಂತರ ದಾವಾ ಅನುಸೂಚಿ ಸ್ವತ್ತುಗಳಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಅಥವಾ ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಾನು ಸ್ವಾಧೀನತೆ ಇಲ್ಲದೇ ಇದ್ದರೂ ಸಹ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ-2 ನೇ ಅನುಸೂಚಿ ಸ್ವತ್ತಿನ ಚೆಕ್ಕುಬಂಧಿಗಳು ನನಗೆ ಗೊತ್ತಿಲ್ಲ. ಭೂಮಾಪಕರು ಅಳತೆ ಮಾಡಿದ್ದ ಸಂಬಂಧವಾಗಿ ಮಹಜರ್ ಮತ್ತು ಹೇಳಿಕೆಯನ್ನು ಹಾಜರುಪಡಿಸಿರಬಹುದು.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.